ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು)

ಅ) ಸಹಾಯಧನ ನೀಡುವ ಕಾರ್ಯಕ್ರಮ ಇರುವುದಿಲ್ಲ

ಆ) ಉದ್ಭವಿಸುವುದಿಲ್ಲ

ಇ) ಉದ್ಭವಿಸುವುದಿಲ್ಲ

525(815) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಕಾರಣಕರ್ತರಾದ ಕರ್ನಾಟಕ ಏಕೀಕರಣ ಧುರೀಣರಾದ ದಿವಂಗತ ಎಸ್ ಆರ್ ಕಂರಿಯವರ ಹೆಸರನ್ನು ಬೆಂಗಳೂರು ವಿಶ್ವವಿದ್ಯಾನಿಲಯಕ್ಕೆ ನಾಮಕರಣ ಮಾಡಲು ಸರ್ಕಾರವು ಯೋಚಿಸಿದೆಯೇ,

ಆ) ಬೆಂಗಳೂರು ವಿಶ್ವವಿದ್ಯಾನಿಲಯದ ಸಮಗ್ರ ಬೆಳವಣಿಗೆಗೆ ಸರ್ಕಾರ ಹಾಕಿಕೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಡಿ ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು)

ಅ) ಇಲ್ಲ

ಆ) ಭವಿಷ್ಯದ ಶೈಕ್ಷಣಿಕ ಮತ್ತು ಸಂಶೋಧನಾ ಅಭಿವೃದ್ಧಿಗಾಗಿ ಬೆಂಗಳೂರು ವಿಶ್ವವಿದ್ಯಾಲಯ ಈ ಕೆಳಕಂಡ ಪ್ರಮುಖವಾದ ಯೋಜನೆಗಳನ್ನು ಹಮ್ಮಿಕೊಂಡಿದೆ –

1) ಹೊಸ ಶೈಕ್ಷಣಿಕ ಕೋರ್ಸುಗಳನ್ನು ಈಗಿನ ಪರಿಸ್ಥಿತಿಗೆ ಅನುಗುಣವಾಗಿ ಉದ್ದೇಶ ಪೂರಿತ ಚಟುವಟಿಕೆಗಳನ್ನು ಜೈವಿಕವಿಜ್ಞಾನ, ಸೂಕ್ಷ್ಮ ವಿಜ್ಞಾನವನ್ನು ಹಾಗೂ ಮಾಹಿತಿ ತಂತ್ರಜ್ಞಾನ ಇವುಗಳಲ್ಲಿ ಉನ್ನತ ವ್ಯಾಸಂಗವನ್ನು ಮುಂದುವರಿಸಲು ಆ ವಿಭಾಗಗಳಲ್ಲಿ ಕೇಂದ್ರಗಳನ್ನು ಸ್ಥಾಪಿಸುವುದು

2) ಜೈವಿಕ ವಿಜ್ಞಾನ ಹಾಗೂ ಭೌತಶಾಸ್ತ್ರ ಇವುಗಳಲ್ಲಿ ರಾಷ್ಟ್ರೀಯ ಮಟ್ಟದ ಸಂಶೋಧನ ಕೇಂದ್ರಗಳನ್ನು ಸ್ಥಾಪಿಸುವುದು

3) ಇಂಟಿಗ್ರೇಟೆಡ್ ಬಿಎಸ್ಸಿ, ನಾಲ್ಕು ವರ್ಷದ ಬಿಎಸ್ಸಿ, ಹಾನರ್ಸ್ ಹಾಗೂ ಎಂ ಎಸ್ಸಿ, ಹೊಸ ಕೋರ್ಸುಗಳನ್ನು ಸೆಂಟ್ರಲ್ ಕಾಲೇಜಿನಲ್ಲಿ ಪುನರ್ ಪ್ರಾರಂಭಿಸುವುದು

4) ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್‌ನಲ್ಲಿ ವಿವಿದೋದ್ದೇಶ ವನಗಳನ್ನು ಶೈಕ್ಷಣಿಕ ಸಂಶೋಧನೆ ಹಾಗೂ ಉನ್ನತ ಅಧ್ಯಯನಕ್ಕೆ ಬೇಕಾಗುವ ವಿವಿಧ ಜಾತಿ ಸಸ್ಯಗಳು ಹಾಗೂ ವೈದ್ಯಕೀಯ ಗಿಡಗಳನ್ನು ಸಂರಕ್ಷಿಸುವ ಕಾರ್ಯವಿಧಾನಗಳ ಕೇಂದ್ರ ಸ್ಥಾಪನೆ ಮಾಡುವುದು

5) ವಿದೇಶಗಳ ಶೈಕ್ಷಣಿಕ ಹಾಗೂ ಸಂಶೋಧನ (ಆರ್ ಅಂಡ್ ಡಿ) ವಿಭಾಗಗಳೊಂದಿಗೆ ಎಂಒಯು (ಒಡಂಬಡಿಕೆ) ಮಾಡಿಕೊಳ್ಳುವುದು

526(807) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ಬೆಂಗಳೂರು ನಗರದಲ್ಲಿ ಮಾವಿನ ಹಣ್ಣಿನ, ಸಗಟು ಮಾರಾಟವನ್ನು ಯಾವ ಸ್ಥಳದಲ್ಲಿ ನಡೆಸಲಾಗುತ್ತಿದೆ

ಆ) ಸದರಿ ಸ್ಥಳದಲ್ಲಿ ನಡೆಸಲು ಸಗಟು ಮಾರಾಟಗಾರರು ನ್ಯಾಯಾಲಯದ ಮೊರೆ ಹೋಗಿರುವುದರ ಬಗ್ಗೆ ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ